ಕಲ್ಪನೆ ಕಾವ್ಯ

## ಅಂಗಡಿ ಮುಂದೆ

ಅಜ್ಜಿ ಕೊಟ್ಟಳು ಒಂದು ರೂಪಾಯಿ
ಸಂತಸದಿ ಓಡಿದೆ ಶೆಟ್ಟರ ಅಂಗಡಿಗೆ
ಪೇಪೇ, ಪಾಪುಡಿ, ಚುರಮುರಿ
ಯಾವುದು ತೊಗೊಳಲಿ,
ಮನಸಲಿ ಮೂಡಿದೆ ಗೊಂದಲ.

ಅಂಗಡಿ ಮುಂದೆ ಹೋಗಿ ನಿಲ್ಲಲು
ತರ ತರ ತಿನಿಸು ಸೆಳೆಯಿತು ಇನ್ನು
ಇರುವುದೊಂದೆ ರೂಪಾಯಿ ನನ್ನಲಿ
ಏನೆಲ್ಲ ಪಡೆಯುವ ಆಸೆ ಮನದಲಿ.

ಸಣ್ಣ ಕಿಂಡಿಯ ಕಪಾಟಿನ ಅಂಗಡಿ
ಎದುರು ಶೆಟ್ಟರ ಕೂಗುತ ನಿಂತಿಹೆನು
ಏನು ಬೇಕು ಎಂದು ಕೇಳುತಲಿ
ಕುರ್ಚಿ ಮೇಲೇರಿ ಕುಳಿತರು.

ಕಣ್ಣಿಗೆ ಬಿದ್ದಿತು ಮೈಸೂರ ಪಾಕು
ಎಚ್ಚರ ತಪ್ಪಿತು ನಾಲಿಗೆ ಯಾಕೊ
ಮೈಸೂರ ಪಾಕೆಂದು ಹಣ ನೀಡಲು
ಮರು ಮಾತಾಡದೆ ಕೈಗೆ ಇತ್ತರು.

ಸಂತಸದಿಂದಲಿ ಸಾಗಿದೆ ಮನೆಕಡೆ
ಸಿಹಿ ಪರ್ವತವೆ ಸಿಕ್ಕಂತಾಗಿದೆ ನನಗೀಗ
ಮನೆಗೆ ಬರುವ ಮುನ್ನ ಎಲ್ಲ ಖಾಲಿಖಾಲಿ
ಕಿಸೆಗೆ ಕೈ ಹಾಕಿದರೆ ಅಜ್ಜಿಯ
ಒಂದು ರೂಪಾಯಿ ಎಲ್ಲಿ...

● ಸುನೀಲ್ ಎಸ್. ಗುಡಿಹಾಳ್

## ಮರಳಿ ಮರುಕಳಿಸಿ

ಹಸಿರು ಅಂಗಡಿಯ ಗುರು ಅಣ್ಣ
ತಂದಿರುವೆನು ನಾನು ಕಾಸನು



ಕೊಡಿ ತಿಂಡಿತಿನಿಸುಗಳನು
ಹೋಗವೆನು ನಾನು
ಹುಲ್ಲುಕಡ್ಡಿಯ ಮನೆಗಿನ್ನು.

ಮಧ್ಯಾಹ್ನ ಶಾಲೆಯ ತೊರೆದು
ಹೋಟೆಲ್‌ಗೆ ಹೋಗಿ
ತಟ್ಟೆಯ ತೆಗೆದು, ಟೇಬಲ್ ಒರೆಸಿ
ಬಂದಿರುವೆನು ಹೊಸ ಅಂಗಿಯ ಧರಿಸಿ.

ಹಸಿರು ಅಂಗಡಿಯ ಗುರು ಅಣ್ಣ
ತಂದಿರುವೆನು ಹತ್ತು ರೂಪಾಯನ್ನ
ಸಣ್ಣ ಬಾಟಲಿಯ ಬಿಸ್ಕೇಟು,
ಆ ಕೆಂಪು ಚಾಕ್ಲೇಟು,
ನಾಲ್ಕು ಬಾಳೆಹಣ್ಣ ಕೊಟ್ಟು
ಐದು ರೂಪಾಯಿ ಚಿಲ್ಲರೆ ನೀಡಿದರೆ,
ಮತ್ತೆ ಬರುವೆ ನಾನು
ಹೋಗಿ ನನ್ನ ಹುಲ್ಲುಕಡ್ಡಿಯ ಮನೆಗಿನ್ನು.

ಅಮ್ಮ ನಾ ಇಂದು ದುಡಿದಿರುವುದು
ಐದು ರೂಪಾಯಿ. ಕಷ್ಟಪಟ್ಟು
ದುಡಿಯುವೆನು ಇನ್ನು ಮುಂದೆ
ಇದಕ್ಕಿಂತ ಐದು ಪಟ್ಟು.
ಅಮ್ಮ ಹಸಿದು–ಕುಸಿದು,
ಕಾಲಿಯಾಗಿದೆ ಹೊಟ್ಟೆ.
ಹೋಗುವೆನು ನಾನು,
ಗುರು ಅಣ್ಣನ ಹಸಿರು ಅಂಗಡಿಗಿನ್ನು.

● ಸುಮಂತ್ ಚಿನಿವಾರ್